ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ ೧೯ನೇ ಮಾರ್ಚ್ ೧೯೯೧ ಫಾಲ್ಗುಣ ೧೯೧೨,

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: **(ಶ್ರೀ ಎಸ್.ಎಂ. ಕೃಷ್ಣ)** ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್ ಅವರೇ ನಿಮ್ಮ ಪ್ರಶ್ನೆ ಸಂಖ್ಯೆ : 220 (1442) ಶಿಕ್ಷಣ ಸಚಿವರಿಗೆ ವರ್ಗಾವಣೆ ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ಇದು ಸರ್ಕಾರದ ನೀತಿಯ ಪ್ರಶ್ನೆ. ಇದು ಸರ್ಕಾರದ ನೀತಿ ಇದು. ಯಾವ ಇಲಾಖೆಯವರು ಉತ್ತರ ಕೊಡಬೇಕು ಎಂದು ಅಲ್ಲಿ ನಮ್ಮ ಕರ್ನಾಟಕ ಸರ್ಕಾರ ಈ ರೀತಿ ಗಡಿ ನಾಡಿನಲ್ಲಿರತಕ್ಕಂಥ ಹೊರನಾಡಿನಲ್ಲಿತಕ್ಕಂಥವರಿಗೆ ನಾವು ಯಾವುದೇ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಸೀಟುಗಳನ್ನು ಕಾದಿರಿಸುತ್ತೇವೆಯೇ ಇಲ್ಲವೇ ಎನ್ನುವುದು. ಇದು ಏನು ಒಂದು ಎಜುಕೇಷನ್‌ನವರಾಗಲೀ ಅಥವಾ ಇನ್ನೊಬ್ಬರು ವೈಯಕ್ತಿಕವಾಗಿ ಹೇಳಿತಕ್ಕಂಥದ್ದು ಅಲ್ಲ. ಸರ್ಕಾರದ ನೀತಿ ಏನು ಎನ್ನತಕ್ಕಂಥದ್ದು ಅಷ್ಟೇ ನನ್ನ ಪ್ರಶ್ನೆ. ಇದಕ್ಕೆ ಸರ್ಕಾರದ ನೀತಿ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ: ನಾಳೆಯೇ ಈ ಪ್ರಶ್ನೆಯನ್ನು ಹಾಕಬಹುದು. ವರ್ಗಾವಣೆ ಆಗಿಲ್ಲ.

ಅಧ್ಯಕ್ಷರು: ನಾಳೆ ಇದನ್ನು ತೆಗೆದುಕೊಳ್ಳೋಣ

ಶ್ರೀ ವಾಟಾಳ್ ನಾಗರಾಜ್: ಆಗಬಹುದು.

ಮುಖ್ಯ ಮಂತ್ರಿ ಹಾಗೂ ಇತರ ಸಚಿವರುಗಳಿಗೆ ಬರೆದಿರುವ ಪತ್ರಗಳು.

995 - ಶ್ರೀ ಅಂಜನ ಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕಸಭಾ, ರಾಜ್ಯಸಭಾ, ವಿಧಾನಸಭಾ ಮತ್ತು ವಿಧಾನ ಪರಿಷತ್, ಸದಸ್ಯರುಗಳು ಅವರವರ ಕ್ಷೇತ್ರಗಳ ಅಭಿವೃದ್ಧಿ ಬಗ್ಗೆ, ಆಡಳಿತದ ಬಗ್ಗೆ, ಮುಖ್ಯ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟ ಸಚಿವರುಗಳಿಗೆ ಪತ್ರ ಮುಖೇನ ಮನವಿ ಮಾಡಿಕೊಂಡಿದ್ದರೆ ಮೇರೆಗೆ ಸಚಿವರುಗಳು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರುಗಳಿಗೆ ಸೂಚಿಸುವ ಅನೇಕ ಪತ್ರಗಳು ಯಾವ ಕ್ರಮ ಕೈಗೊಳ್ಳದೆ ನಿಷ್ಕ್ರೀಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಹಾಗಿದ್ದಲ್ಲಿ, ಅಂತಹ ಪತ್ರಗಳಿಗೆ ಕೊನೆಯ ಪಕ್ಷ ಹದಿನೈದು ದಿವಸಗಳೊಳಗಾಗಿ ಸಂಬಂಧಪಟ್ಟ ಸದಸ್ಯರುಗಳಿಗೆ ಉತ್ತರ ಕಳುಹಿಸುವಂತೆ ಸರ್ಕಾರವು ಸೂಕ್ತ ಆದೇಶ ನೀಡುವುದೆ?

ಶ್ರೀ ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಅಂಜನ ಮೂರ್ತಿ: ಮಾನ್ಯ ಸಭಾಧ್ಯಕ್ಷರೇ, ಈ ಉತ್ತರ ನೋಡಿದರೆ ಆಶ್ಚರ್ಯವಾಗುತ್ತದೆ. ನಾನು ಕೆಲವು ಮಂತ್ರಿಗಳ ಹೆಸರನ್ನು ಬೇಕಾದರೆ ಹೇಳುತ್ತೇನೆ. ನಾವು ಕೊಟ್ಟಂಥ ಪತ್ರಗಳಿಗೆ ಯಾವ ಉತ್ತರವನ್ನೂ ಕೊಡುವುದಿಲ್ಲ, ಕೊನೆಯ ಪಕ್ಷ ಅಧಿಕಾರಿಗಳು ಸಹ ಯಾವ ಒಂದು ಸೌಜನ್ಯವನ್ನೂ ಕೂಡಾ ತೋರಿಸುವುದಿಲ್ಲ ಮತ್ತು ಅವರು ಉತ್ತರವನ್ನೂ ಕೊಡುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಇದು ಸತ್ಯಕ್ಕೆ ದೂರವಾದ ಮಾತು. ಆದ್ದರಿಂದ ನಾನು ಏನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಇನ್ನೂ ಮುಂದಾದರೂ ಕೊನೆಯ ಪಕ್ಷ 15 ದಿವಸದ ಒಳಗೆ ಏನು ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರು, ವಿಧಾನಸಭೆಯ ಸದಸ್ಯರು ಏನು ಪತ್ರಗಳನ್ನು ಮುಖ್ಯಮಂತ್ರಿಗಳಿಗೆ ಅಥವಾ ಸಂಬಂಧಪಟ್ಟ ಮಂತ್ರಿಗಳಿಗೆ ಬರೆಯುತ್ತಾರೋ, ಅದಕ್ಕೆ ಉತ್ತರವನ್ನು ಕೊಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು ಎಂದು ಮತ್ತು ಒಂದು ಆದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಅದಕ್ಕೆ ಪಂಚಸೂತ್ರಗಳನ್ನು ಹಾಕಿರುವುದು. ಇನ್ನು ಮೇಲೆ ಸರಿಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ಆದ್ಯ ಕರ್ತವ್ಯ ಇದೆ ಇದರಲ್ಲಿ. ಒಂದು ವೇಳೆ ಮಾನ್ಯ ಮುಖ್ಯಮಂತ್ರಿಗಳೇ ಇರಬಹುದು, ಸಚಿವರೇ, ಅಧಿಕಾರಿಗಳೇ ಇರಬಹುದು. ಈ ಮೂರು ವರ್ಗಗಳು ಸೇರಿಕೊಂಡಂತೆ ಇರಬಹುದು. ಮಾನ್ಯ ಸದಸ್ಯರು ಹೇಳಿದಂತೆ ಲೋಕಸಭಾ ಅಥವಾ ರಾಜ್ಯಸಭಾ ಸದಸ್ಯರು ಅಂದರೆ ಅವರು ಜನರ ಪ್ರತಿನಿಧಿಗಳು, ಎಂ.ಎಲ್.ಎ., ಎಂ.ಎಲ್.ಸಿ. ಇವರುಗಳು ಸಹ ಪತ್ರ ಬರೆದರೂ ಕೂಡಾ ಉತ್ತರಗಳನ್ನು ಕೊಡಬೇಕು. ಎಲ್ಲಿಗೆ ಯಾವ ವಿಚಾರಕ್ಕಾಗಿ ಬರೆದಿದ್ದೇವೆ ಎಂದು ನಾವು ಅವರಿಗೆ ಹೇಳಬೇಕು. ಆ ರೀತಿಯಲ್ಲಿ ಕಳುಹಿಸಿಕೊಡತಕ್ಕಂಥ ವ್ಯವಸ್ಥೆ ಇಟ್ಟು ನಾವು ಕೆಲಸ ಮಾಡುತ್ತಿದ್ದೇವೆ. ಅದರೂ ಕೂಡಾ ಕೆಲವೊಮ್ಮೆ ಆಡಳಿತದಲ್ಲಿ ಅಂಥ ವ್ಯತ್ಯಾಸ ಬರುತ್ತದೆ. ಇದನ್ನು ಸರಿಪಡಿಸಿಕೊಂಡು ಹೋಗಿ ಆದಷ್ಟು ಅವರೇ ಹೇಳಿದ ಹಾಗೆ ಮಾಡಿಕೊಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ದ. ಕನ್ನಡ ಜಿಲ್ಲೆಯ ಶಿರೂರಿನ ಬಂದರುಗಳ ಅಭಿವೃದ್ಧಿ ಕುರಿತು.

1489 - ಶ್ರೀ ಬಿ.ಎಸ್. ಆಚಾರ್ (ಬೈಂದೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಮೀನುಗಾರಿಕೆಯ ಮೂಲಭೂತ ಅವಶ್ಯಕತೆಗಳನ್ನೊದಗಿಸಲು ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಲಾಗಿದ್ದರೂ ಬಂದರು ಅಭಿವೃದ್ಧಿಗಾಗಿ ಗಮನ ನೀಡದಿರಲು ಕಾರಣವೇನು?